ಶ್ರೀ ಕೆ. ಶ್ರೀರಾಮುಲು.—ಈಗ ತಿಂಗಳಿಗೆ 8 ಕೆ. ಜಿ. ಆಹಾರ ಧಾನ್ಯಗಳನ್ನು ಕೊಡುವಂತೆ ಆದೇಶ ನೀಡಲಾಗಿದೆ ಎಂದು ಹೇಳಿದ್ದೀರಿ. ಈ ತಿಂಗಳು ಖರೀದಿ ಮಾಡಿದವರಿಗೆ ಮುಂದಿನ ತಿಂಗಳು ಖರೀದಿ ಮಾಡುವುದಕ್ಕೆ ಅನುಮತಿ ಕೊಡಲು ಮಾನ್ಯ ಚಿಕ್ಕೇಗೌಡರು ಒಪ್ಪಿಕೊಂಡಿದ್ದರು. ಅದರ ಪ್ರಕಾರ ಈಗ ನಡೆದುಕೊಳ್ಳಲಾಗುತ್ತಿದೆಯೇ ಅಥವಾ ಇನ್ನು ಮುಂದೆಯಾದರೂ ಈ ರೀತಿ ಮಾಡುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಕೊಂಡುಕೊಳ್ಳುವವರಿಗೆ ಅನಾನುಕೂಲವಾಗಿ ತೆಗೆದುಕೊಳ್ಳದಿದ್ದರೆ ಮುಂದಿನ ತಿಂಗಳು ಕೊಡುವುದಕ್ಕಾಗುವುದಿಲ್ಲ. ಆದರೆ ನಮ್ಮಲ್ಲಿ ಸ್ಟಾಕ್ ಇಲ್ಲದಿದ್ದರೆ ಅದನ್ನು ಮುಂದಿನ ತಿಂಗಳಲ್ಲಿ ಕೊಡಿಸುವ ಏರ್ಪಾಡು ಮಾಡುತ್ತೇವೆ.

ಶ್ರೀ ಪಿ. ಎಂ. ಬಂಗಿ.—ಬರಗಾಲ ಪೀಡಿತ ಪ್ರದೇಶವಾದ ಬಿಜಾಪುರ ಪಟ್ಟಣದಲ್ಲಿ ಕೂಲಿ ಗಾರರು ಜಾಸ್ತಿ ಇದ್ದಾರೆ. ಅವರಿಗೆ ತಿಂಗಳಿಗೆ ಎಷ್ಟು ಕೆ.ಜಿ. ಆಹಾರಧಾನ್ಯ ಕೊಡುವ ಏರ್ಪಾಡು ಮಾಡಿದ್ದೀರಿ ?

ಶ್ರೀಮತಿ ಇ. ಇ. ವಾಜ್.—ಬಿಜಾಪುರ ಜಿಲ್ಲೆಯಲ್ಲಿ ಈ ಮೊದಲು ಇದ್ದ 1900 ನ್ಯಾಯಬೆಲೆ ಅಂಗಡಿಗಳನ್ನು 1973ಕ್ಕೆ ಹೆಚ್ಚಿಸಿದ್ದೇವೆ. ಅಗತ್ಯ ಕಂಡುಬಂದರೆ ಇನ್ನೂ ಜಾಸ್ತಿ ಮಾಡುವುದಕ್ಕೆ ಜಿಲ್ಲಾಧಿಕಾರಿಯವರಿಗೆ ಆದೇಶ ಕೊಡಲಾಗಿದೆ.

ಶ್ರೀ ಕೆ. ಎಂ. ನಾಗಣ್ಣ.—ಈ ಸರ್ಕಾರದವರು ಅಧಿಕಾರಕ್ಕೆ ಬಂದಮೇಲೆ ಸ್ಟಾಕ್ ಇದ್ದರೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈಗ ಒದಗಿಸುತ್ತಿರುವ ಗೋಧಿಯಲ್ಲಿ ಹತ್ತು ಕೆ.ಜಿ.ಗೆ ಎರಡು ಕೆ.ಜಿ.ಯಷ್ಟು ಕನಕಡ್ಡಿ ಇರುತ್ತದೆ. ಇಂಥಾದ್ದನ್ನು ಏತಕ್ಕೆ ಖರೀದಿ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಗೋಧಿಯಲ್ಲಿಯೂ ಕನಕಡ್ಡಿ ಇರುತ್ತದೆ. ನಮ್ಮ ಹಂಚುವ ಗೋಧಿಯಲ್ಲಿ ಜಾಸ್ತಿ ಕನಕಡ್ಡಿ ಇದ್ದರೆ ಅದರ ಬಗ್ಗೆ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಭದ್ರಾವತಿ ಪಟ್ಟಣದಲ್ಲಿ 20 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿರುವುದರಿಂದ ಅನ್ಯಪಚಾರಿಕ ಪಡಿತರ ಪದ್ಧತಿಯನ್ನು ಜಾರಿಗೆ ತರುವುದು ಉಚಿತವಲ್ಲವೇ ? ಆ ಬಗ್ಗೆ ತಕ್ಷಣ ಕ್ರಮ ಕೈಕೊಳ್ಳುತ್ತೀರಾ ?

Smt. E. E. VAZ.—The Suggestion will be examined.

Bifurcation of First Grade College at Tumkur

777. Sri B. BYRAPPAJI (Turuvekere).—

Will the Minister for Education be pleased to state.—

(*a*) the number of students studying in First Grade College, Tumkur ;

(*b*) the number of lecturers in the College ;

(*c*) whether it has come to the notice of Government that due to increase in students' strengh and due to unsmooth administration in the college students disturbance took place last year ;

(*d*) if so, whether the Government realise that it is desirable to bifurcate the college into Arts and Science Colleges ?

Sri A. R. BADARINARAYANA (Minister for Education).—

(*a*) 3,500 Students.

(*b*) 106.

(SRI A. R. BADARINARAYANA)

(*c*) No disturbance took place due to increase in students' strength and unsmooth administration in the said college.

(*d*) The Government have issued an order to bifurcate the college into Arts and Science Colleges in view of increase in students' strength.

ಶ್ರೀ ಬಿ. ಬೈರಪ್ಪಾಜಿ.—ಎರಡು ಭಾಗಗಳಾಗಿ ಮಾಡಲು ಸರ್ಕಾರ ಆಜ್ಞೆಯನ್ನು ಹೊರಡಿಸಿದೆ ಎಂದು ಹೇಳಿದ್ದೀರಿ. ಈ ರೀತಿ ಸರ್ಕಾರದ ಆಜ್ಞೆಯನ್ನು ಹೊರಡಿಸಿದ್ದರೂ ಸಹ ಇಲ್ಲಿಯವರೆಗೆ ಎರಡು ಭಾಗಗಳಾಗಿ ಮಾಡದಿರುವುದಕ್ಕೆ ಕಾರಣವೇನು ? ಮತ್ತು ಆ ರೀತಿ ಆರ್ಡರ್ ಆಗಿ ಎಷ್ಟು ಕಾಲವಾಯಿತು ?

† ಶ್ರೀ ಎ. ಆರ್. ಬದರಿನಾರಾಯಣ.—ಆರ್ಡರ್ ಆಗಿ ಮೂರು ತಿಂಗಳಾಯಿತು. ಈಗ ಮಿಡ್-ಟರ್ಮ್ ಆದ್ದರಿಂದ ಮುಂದಿನ ಅಕಡಮಿಕ್ ವರ್ಷದಿಂದ ಮಾಡುತ್ತಾರೆ.

ಶ್ರೀ ಬಿ. ಬೈರಪ್ಪಾಜಿ.—ನಮಗೆ ಬಂದಿರುವ ವರ್ತಮಾನದ ಪ್ರಕಾರ ಕಟ್ಟಡದ ಕೊರತೆಯಿಂದ ಎರಡು ಭಾಗಗಳಾಗಿ ಮಾಡುವುದಕ್ಕೆ ತೊಂದರೆಯಾಗಿದೆ ಎಂದು. ಅದಕಾರಣ ಕಟ್ಟಡಗಳನ್ನು ಕಟ್ಟಿಸಲು ಕೂಡಲೇ ಕ್ರಮ ಕೈಕೊಳ್ಳುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ.—ಕಟ್ಟಡಗಳ ತೊಂದರೆ ಎಲ್ಲ ಕಡೆಗಳಲ್ಲಿಯೂ ಇದೆ. ಕಟ್ಟಡದ ತೊಂದರೆ ಇರಲಿ, ಅಥವಾ ಇಲ್ಲದಿರಲಿ ; ಇರುವ ಅನುಕೂಲದಲ್ಲಿಯೇ ಎರಡು ಭಾಗಗಳನ್ನಾಗಿ ಮಾಡುವುದಕ್ಕೆ ಏರ್ಪಾಡು ಮಾಡಲಾಗುತ್ತದೆ.

Recovery of Term Fees from Scheduled Castes and Scheduled Tribes Students

836. Sri D. NARAYANA DAS (Harapanahalli).—

Will the Minister for Education be pleased to state: —

(*a*) the amount of fees recovered per term from Scheduled Castes and Scheduled Tribes students in Veerashaiva College at Bellary and Vijayanagar College at Hospet ;

(*b*) the action taken by the Government regarding recovery at the same rate of fees from the students of Scheduled Castes and Scheduled Tribes in the said Colleges as is done compulsorily in respect of other Community students although the constitution forbids such recovery of fees from Scheduled Castes and Scheduled Tribes students;

(*c*) whether it is possible to refund the fees recovered in the above Colleges from their inception to the respective students or whether Government will de-recognise such colleges ?

Sri A. R. BADARINARAYANA (Minister for Education).—

(*a*) According to Government Order No. ED 130 'CSS 67 dated 14th March, 1968 the fees need not be recovered from the students of S.C./S.T. But in case such students have failed to produce an